Effecting Repairs to Jambayyanakere.

Q.—264. Sri M. M. PATIL (Hadagali).—

Will the Government be pleased to state :—

(*a*) whether any representation has been made to effect repairs to Jambayyanakere near Thimmalapur village in the H bli of Belakanahatti, Hospet Taluk ;

(*b*) if so, the action taken in that behalf ?

A.—Sri H. K. VEERANNA GOWDH (Minister for Public Works).—

(*a*) Yes.

(*b*) An estimate for Rs. 2,950 has been sanctioned. The work will be taken up for execution and completed as soon as possible.

ಶ್ರೀ ಎಂ. ಎಂ. ಪಾಟೀಲ್.—ಈ ಕೆಲಸ ಯಾವಾಗ ತೆಗೆದುಕೊಳ್ಳೋಣವಾಗುತ್ತದೆ ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಕೆರೆಯಲ್ಲಿ ಇನ್ನೂ ಎಂಟು-ಹತ್ತು ಅಡಿ ನೀರು ಇದೆ, ಅಲ್ಲಿ ನೀರು ಕಡಮೆ ಯಾದ ಕೂಡಲೇ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಎಂ. ಪಾಟೀಲ್.—ಆ ಕೆರೆಯ ಕೆಳಗೆ ಅಚ್ಚುಕಟ್ಟು ಎಷ್ಟು ಇದೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಮೊದಲೇ ತಾವು ಕೇಳಿದ್ದರೆ ತರಿಸುತ್ತಿದ್ದೆ.

Police Inspectors and Sub-Inspectors in Bangalore District whose Service is more than two years in each place.

Q.—297. Sri S. KARIAPPA (Virupakshipura).—

Will the Government be pleased to state :—

the number of Police Inspectors and Sub-Inspectors who are in the same place for more than two years in various taluks in Bangalore District ?

A.—Sri C. M. POONACHA (Minister for Home Affairs and Industries).—

(1) *Police Inspectors* :

(i) Sri K. Venkataramiah, P.I., Channapatna, is in the Taluk since 14th May 1955 (He is under orders of transfer to Pavagada Taluk).

(ii) Sri K. L. Krishnaswamy, P.I., Nelamangala, is in the Taluk since 17th February 1955.

(2) *Sub-Inspectors.*

(i) Sri T. N. Gopalakrishna Iyengar (Ramanagaram Prosecution, dated 3rd November 1954).

(ii) Sri N. Subba Rao (Special Branch, District Police Office, Bangalore District, dated 7th February 1955).

(iii) Sri T. Mudigiriappa, Harohalli Range, dated 4th February 1955.

(iv) Sri D. Krishna Murthy (Doddabelavangala, 22nd July 1953, since transferred to Kodihalli.)

ಶ್ರೀ ಎಸ್. ಕರಿಯಪ್ಪ.—ಪೋಲೀಸ್ ಇನ್‌ಸ್ಪೆಕ್ಟರು ಮತ್ತು ಸಬ್-ಇನ್‌ಸ್ಪೆಕ್ಟರುಗಳನ್ನು ಒಂದೇ ಸ್ಥಳದಲ್ಲಿ ಇಷ್ಟುಕಾಲಕ್ಕಿಂತಲೂ ಜಾಸ್ತಿ ಇಡಕೂಡದು ಎಂದು ನಿಯಮವಿದೆಯೇ ?

*ಶ್ರೀ ಸಿ. ಎಂ. ಪೂಣಚ್ಚ.—ಮೂರು ವರ್ಷಗಳಿಗಿಂತ ಹೆಚ್ಚಾಗಿ ಒಬ್ಬ ಪೋಲೀಸ್ ಆಫೀಸರನ್ನು ಒಂದೇ ಸ್ಥಳದಲ್ಲಿ ಇಡಬಾರದು ಎಂದು ನಿಯಮವಿದೆ.

ಶ್ರೀ ಎಸ್. ಕರಿಯಪ್ಪ.—ಈಗ ಆ ನಿಯಮವನ್ನು ಉಲ್ಲಂಘನೆ ಮಾಡಲಿಲ್ಲವೇ ?

ಶ್ರೀ ಸಿ. ಎಂ. ಪೂಣಚ್ಚ.—ಅದು ಈ ಪ್ರಶ್ನೆ ಮೇಲೆ ಉದ್ಭವಿಸುವುದಿಲ್ಲ. ತಮ್ಮ ಪ್ರಶ್ನೆ ಇದರಲ್ಲಿ ಇಲ್ಲ.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—ಈಗ ಕೊಟ್ಟಿರುವ ಉತ್ತರದಲ್ಲಿ ಒಂದೇ ಸ್ಥಳದಲ್ಲಿ ಹೆಚ್ಚಿಗೆ ಮೂರು ವರ್ಷಕ್ಕಿಂತ ಹೆಚ್ಚು ಇದ್ದವರು ಯಾರಾದರೂ ಇದ್ದಾರೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ತಮ್ಮ ಮುಂದೆ ಪಟ್ಟಿ ಇದೆ.

ಶ್ರೀ ಎಸ್. ಆರ್. ರಾಮಯ್ಯ.—ಒಬ್ಬರು ಸಬ್-ಇನ್‌ಸ್ಪೆಕ್ಟರನ್ನು ಒಂದೇ ತಾಲ್ಲೂಕಿನಲ್ಲಿ ಒಂದು ರೇಂಜಿನಿಂದ ಇನ್ನೊಂದು ರೇಂಜಿಗೆ ಟ್ರಾನ್ಸ್‌ಫರ್ ಮಾಡಿದರೆ ಅದನ್ನು ಟ್ರಾನ್ಸ್‌ಫರ್‌ಮಾಡಿದ್ದು ಎಂದು ಪರಿಗಣಿಸುವುದಕ್ಕಾಗುತ್ತದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಅದು ಟ್ರಾನ್ಸ್‌ಫರ್ ಆಗುವುದಿಲ್ಲ.

ಶ್ರೀ ಎಸ್. ಕರಿಯಪ್ಪ.—ಬೇರೆ ಇಲಾಖೆಗಳಲ್ಲಿ ಮೂರು ವರ್ಷಗಳಿಗಿಂತಲೂ ಜಾಸ್ತಿ ಇರಕೂಡದು ಎಂದು ಇದೆ. ಆದರೆ ಪೋಲೀಸ್ ಇಲಾಖೆಯಲ್ಲಿ ಎರಡು ವರ್ಷಗಳಿಗಿಂತ ಜಾಸ್ತಿ ಒಂದೇಕಡೆ ಇರಕೂಡದು ಎಂದು ನಿಯಮವಿದೆಯಲ್ಲವೇ ?

ಶ್ರೀ ಸಿ. ಎಂ. ಪೂಣಚ್ಚ.—ಇಲ್ಲ. ಆ ರೀತಿ ಇದ್ದ ಹಾಗೆ ತಿಳಿದು ಬರಲಿಲ್ಲ.

ಶ್ರೀ ಎಸ್. ಕರಿಯಪ್ಪ.—ಈ ನಿಯಮವನ್ನು ಉಲ್ಲಂಘಿಸಿಲ್ಲ ಎಂದು ತಾವು ಅಪ್ಪಣೆಕೊಡಿಸಿದಿರಿ. ನಾಲ್ಕನೇ ನಂಬರಿನಲ್ಲಿ ಸೂಚಿಸಿದ ಸಬ್-ಇನ್‌ಸ್ಪೆಕ್ಟರುಗಳು ನಿಯಮ ಉಲ್ಲಂಘಿಸಿಲ್ಲವೇ ?

ಶ್ರೀ ಸಿ. ಎಂ. ಪೂಣಚ್ಚ.—ಇತ್ತೀಚಿಗೆ ವರ್ಗಮಾಡ ಲಾಗಿದೆ ಎಂದುಕೂಡ ನಾವು ಹೇಳಿದ್ದೇವೆ.

Preservation of Forest Wealth at Kollegal Taluk.

Q.—270. Sri G. VENKATAI GOWDA (Palaiyam).—

Will the Government be pleased to state :—

the steps taken to preserve the forest wealth of Kollegal Taluk ?

A.—Sri H. S. RUDRAPPA (Minister for Agriculture).—

The normal protective measures in addition to a Special Petrol Party to conduct surprise raids in areas from which illicit removals are common.

Sri G. VENKATAI GOWDA.—When did the Special Patrol Party come into being ?

*Sri H. S. RUDRAPPA.—I learn it is there from a long time.

Sri G. VENKATAI GOWDA.—How many cases of illicit transport have been reported ?

Mr. SPEAKER.—That is a different question.

Revenue Inspectors for Development Works of Scheduled Castes.

Q.—337. Sri H. K. SIDDIAH (Belur—Scheduled Castes).—

Will the Government be pleased to state :—

(*a*) the number of Revenue Inspectors appointed by them for development work of the Scheduled Castes people ;

(*b*) the salary and allowance paid to these officials ;

(*c*) whether increments are also paid to them ;

(*d*) whether they have been confirmed in their posts ?

A.—Sri R. CHENNIGARAMIAH (Minister for Local Self-Government).—

(*a*) 87. There are no Revenue Inspectors exclusively for the welfare of the Scheduled Castes People. The Special Revenue Inspectors are appointed for the welfare work of Depressed Class (Scheduled Castes and Scheduled Tribes) people.

(*b*) The scale of pay is Rs. 55—3—70—4—110—5—120.

(*c*) Yes.

(*d*) No. As these posts are temporary, the question of confirmation does not arise.

ಶ್ರೀ ಎಚ್. ಕೆ. ಸಿದ್ದಯ್ಯ.—ಹಂಗಾಮಿ ಹುದ್ದೆ ಎಂದು ಹೇಳುತ್ತೀರಲ್ಲ, ಆ ಹುದ್ದೆಯನ್ನು ಖಾಯಂ ಮಾಡುವುದಿಲ್ಲವೇ ?

* ಶ್ರೀ ಆರ್. ಚೆನ್ನಿಗರಾಮಯ್ಯ.—ಖಾಯಂ ಮಾಡುವ ಅವಶ್ಯಕತೆ ಇನ್ನೂ ಕಂಡುಬಂದಿಲ್ಲ.

ಶ್ರೀ ಎಚ್. ಕೆ. ಸಿದ್ದಯ್ಯ.—ಹಿಂದುಳಿದ ಪಂಗಡಗಳ ವರಿಗಾಗಿ ಎಷ್ಟು ಮಂದಿ ಸ್ಪೆಷಲ್ ರೆವೆನ್ಯೂ ಇನ್‌ಸ್ಪೆಕ್ಟ ರುಗಳಿದ್ದಾರೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—87 ಜನ ಎಂದು ಉತ್ತರದಲ್ಲೇ ಹೇಳಿದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಅವರ ಅವಧಿ ಮುಗಿದ ಮೇಲೆ ಅವರನ್ನು ಎಲ್ಲಿಗೆ ಕಳುಹಿಸಬೇಕೆಂದಿದ್ದೀರಿ ?

ಅಧ್ಯಕ್ಷರು.—ಆ ಪ್ರಶ್ನೆ ಈಗ ಉದ್ಭವಿಸುವುದಿಲ್ಲ.

ಶ್ರೀ ಡಿ. ಟಿ. ಸೀತಾರಾಮರಾವ್.—ಅವರ ನಿರ್ದಿಷ್ಟವಾದ ಕೆಲಸವೇನು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಮನೆ ಕಟ್ಟಿಕೊ ಳ್ಳಲು ಒದಗಿಸುವ ಸಾಮಾನು ಸರಿಯಾಗಿ ಸದುಪ ಯೋಗವಾಗಿದೆಯೆ ಇಲ್ಲವೆ, ಅನೇಕ ಕಡೆ ಸ್ಟೆಟು ಸಿಕ್ಕಿರುವುದಿಲ್ಲ, ತಕರಾರಿರುತ್ತದೆ, ಆಗ ಅಕ್ಟೆಪಿಷ್ಟ ವಿಚಾರವೇನಾಗಿದೆ ಎಂಬುದನ್ನೆಲ್ಲಾ ನೋಡಿ ಸರಿ ಯಾದ ಸೌಕರ್ಯ ಕಲ್ಪಿಸಿಕೊಡುವುದು.

ಶ್ರೀ ಕೆ. ಎಲ್. ನರಸಿಂಹಯ್ಯ.—ಸ್ಪೆಷಲ್ ರೆವೆನ್ಯೂ ಇನ್‌ಸ್ಪೆಕ್ಟರ ಗ್ರೇಡಿನಲ್ಲಿ ಎಲ್ಲಾ ನಿಮ್ಮವರ್ಗದವರೇ ಇರ ಬೇಕೆ ಅಥವಾ ಬೇರೆಯವರೂ ಇರಬಹುದೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಬೇರೆಯವರೂ ಇದ್ದಾರೆ.

ಶ್ರೀ ಬಿ. ರಾಚಯ್ಯ.—ಯಾವಾಗ ಈ ಹುದ್ದೆ ಕ್ರಿಯೇಟ್ ಮಾಡಿರುವುದು ?

ಶ್ರೀ ಆರ್. ಚೆನ್ನಿಗರಾಮಯ್ಯ.—1948ನೆಯ ಇಸವಿಯಲ್ಲಿ.

ಶ್ರೀ ಬಿ. ರಾಚಯ್ಯ.—1948ರಿಂದಲೂ ಕೂಡ ಈ ಅಧಿಕಾರಿಗಳನ್ನು ಹಂಗಾಮಿಯಾಗಿ ನೇಮಕಮಾಡಿ ಕೊಂಡು ಬಂದಿರುವುದರಿಂದ ಅವರಿಗೆ ಸರ್ವಿಸ್ಸಿನಲ್ಲಿ ಸೇಫ್ಟಿ, ಸೆಕ್ಯೂರಿಟಿ ಇಲ್ಲವಲ್ಲವೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅವರಿಗೆ ಪರ್ಮ ನೆಂಟ್ ಸೆಕ್ಯೂರಿಟಿಯಿದೆ. ರೆವೆನ್ಯೂ ಇಲಾಖೆಯಿಂದ ಎರಡನೆ ದರ್ಜೆ ಗುಮಾಸ್ತರನ್ನು ಆ ಕೆಲಸಕ್ಕೆ ತೆಗೆದು ಕೊಂಡಿರುವುದರಿಂದ ಅವರಿಗೆ ಸೆಕ್ಯೂರಿಟಿಯಿದೆ.

ಶ್ರೀ ಜಿ. ದುಗ್ಗಪ್ಪ.—ಈ 87 ಮಂದಿಯಲ್ಲಿ ಪರಮಾ ವಧಿ ಸಂಬಳವನ್ನು ತೆಗೆದುಕೊಳ್ಳುತ್ತಿರುವವರು ಎಷ್ಟು ಮಂದಿ ಇದ್ದಾರೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ನೋಟೀಸ್.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಖಾಯಂ ರೆವೆನ್ಯೂ ಇನ್‌ಸ್ಪೆಕ್ಟರ ಸ್ಥಾನ ಖಾಲಿಬಿದ್ದಾಗ ಹಂಗಾಮಿ ಸ್ಪೆಷಲ್ ರೆವೆನ್ಯೂ ಇನ್‌ಸ್ಪೆಕ್ಟರಾಗಿ ಕೆಲಸ